

# ಚಿರಸ್ಮರಣೆ

## ಶ್ರೀಮತಿ ಸರೋಜಮ್ಮನವರು

ಜನನ: 25-09-1919 ನಿಧನ: 11-12-2010

# ಹರಿದಾಸಭಾವದಿಂದಲೇ ಆತ್ಮಸಮರ್ಪಣೆರೂಪ
# ಭಕ್ತಿಯಿಂದ ಭಗವಂತನ ಅತ್ಯರ್ಥಪ್ರಸಾದದ್ವಾರಾ
# ಬಿಂಬಾಪರೋಕ್ಷನಾದ ಶ್ರೀಹರಿಯ ಪ್ರಾರ್ಥನೆ

ಅಣುವೆಂದು ನಿನ್ನನು ಘನವಾಗಿ ಪೂಜಿಸುವೆನೆ
ಅಣುವಲ್ಲ ಅಣುವಲ್ಲ ಅಬುಜೆನಲ್ಲ
ಘನವೆಂದು ನಿನ್ನ ನಾನು
ಅಣುಮಾತ್ರ ಅರ್ಚಿಸುವೆನೆ
ಘನವಲ್ಲ ಘನವಲ್ಲ ಘನಸದೃಶ
ಅಣುವಲ್ಲ ಘನವಲ್ಲ ಗುಣಗಣನಿಲಯನೆ
ಏನೆಂಬೆ ನಿನ್ನ ಸೋಜಿಗವು ನೆಲೆಯಿಲ್ಲ
ಅನಿಮಿಷರೀಶ ನಿನ್ನ ಅನಿಮಿಷಗಣದವರು
ಎಣೆಸಿ ಗುಣೆಸಿ ಗುಣನೆಲೆಗಾಣರೋ
ಮನುಜ ವನಜತನುಜ ಜೀವಾದಿಗಳ
ತನುವಿನೊಳಗೆ ಒಂದಿನವಗಲದೆ
ಧನವ ಕಾಯಿವ ಸರ್ಪನ ತೆರದಿ
ನಮ್ಮನು ಪಾಲಿಸುವ ಕಾಸನು ಬೇಡದೆ
ಘನಮಹಿಮ ವಿಜಯವಿಠಲ
ಮುನಿನುತ ನಿನ್ನ ಅಣು-ಘನರೂಪಕಾಣೆನೊ ನಾನು

**ಶ್ರೀಮತಿ ಸರೋಜಮ್ಮ: ಒಂದು ಸ್ಮರಣೆ**

ಮುಳಬಾಗಿಲು ತಾಲ್ಲೂಕು ಮಂಡಿಕಲ್ ಗ್ರಾಮ ಮೂಲದ ಶ್ರೀಮತಿ ಘಟ್ಟು ಸರೋಜಮ್ಮನವರು ಹುಟ್ಟಿದ್ದು ನೆಗವಾರ ಗ್ರಾಮದಲ್ಲಿ. ಇವರು ಶ್ಯಾನುಭೋಗ ವೆಂಕಣ್ಣ ಮತ್ತು ಕಾವೇರಮ್ಮ ದಂಪತಿಗಳ ಹಿರಿಯ ಪುತ್ರಿಯಾಗಿ 1919ರ ನವರಾತ್ರಿ ಪ್ರತಿಪದದಂದು ಜನಿಸಿದರು.

ಸಂಸ್ಕಾರವಂತ ಹಾಗೂ ದೈವಭಕ್ತ ಕುಟುಂಬದಲ್ಲಿ ಜನಿಸಿದ ಸರೋಜಮ್ಮನವರು ಬಾಲ್ಯದಿಂದಲೇ ರಾಮಾಯಣ, ಮಹಾಭಾರತ ಮತ್ತು ಪುರಾಣದ ಕಥೆಗಳಿಂದ ಸ್ಫೂರ್ತಿ ಪಡೆದರು. ತಾಯಿಯ ಮನೆಯಲ್ಲಿ 1000 ರಾಮನಾಮಕ್ಕೊಂದರಂತೆ ಗಂಧದ ಚುಕ್ಕೆಗಳನ್ನಿಟ್ಟು ರಾಮಕೋಟಿಯ ಜಪವನ್ನು ವಿಶಿಷ್ಟ ರೀತಿಯಲ್ಲಿ ಮಾಡುತ್ತಿದ್ದರು. ಅವರ ಮನೆಯ ಮಾಳಿಗೆಯನ್ನು ನೋಡುವುದೇ ಒಂದು ಆನಂದ, ಅಲ್ಲಿ ಮರದ ಧೂಲಗಳಲ್ಲಿ ಗಂಧದ ಚುಕ್ಕೆಗಳ ಮಹಾಪೂರವೇ ಕಾಣುತ್ತಿತ್ತು.




ತಾಯಿ ಕಾವೇರಮ್ಮ ದಾಸರ ಪದಗಳು, ದೇವರನಾಮಗಳ ಅಖಂಡ ಭಂಡಾರವಾಗಿದ್ದರು. ಮೇಲಾಗಿ ಅವರು ಒಳ್ಳೆಯ ಹಾಡುಗಾರ್ತಿಯಾಗಿದ್ದರು. ರಾಮಾಯಣ, ಮಹಾಭಾರತ ಮತ್ತು ಭಾಗವತ ಪುರಾಣಗಳಿಂದ ಅಂಬರೀಷನ ಕಥೆ, ಧೃವ ಚರಿತ್ರೆ, ಪ್ರಹ್ಲಾದ ಚರಿತ್ರೆ ಮುಂತಾದುವುಗಳ ಬಗ್ಗೆ ಹಾಡುಗಳನ್ನು ಹಾಡುತ್ತಿದ್ದರು. ಇದೇ ಸಂಪ್ರದಾಯ ಮಗಳು ಸರೋಜಮ್ಮನಿಗೂ ಬಂದಿತು. ಸರೋಜಮ್ಮನವರು ದಾಸರ ಪದಗಳು ಮತ್ತು ಜಾನಪದ ಹಾಡುಗಳನ್ನು ಅವ್ಯಾಹತವಾಗಿ ಹಾಡುವುದನ್ನು ಕಲಿತದ್ದು ಈ ಸಂಸ್ಕಾರದಿಂದಲೇ. ಇವರು ಹಾಡುತ್ತಿದ್ದ ರಾಮಾಯಣ, ಮಹಾಭಾರತ, ದಶಾವತಾರದ ಹಾಡುಗಳು ಹಾಗೂ ದ್ರೌಪದಿ ವಸ್ತ್ರಾಪಹರಣ, ಗಜೇಂದ್ರ ಮೋಕ್ಷ, ಭಾಗವತ, ಪ್ರಹ್ಲಾದ ಚರಿತ್ರೆ ಮುಂತಾದ ಹಾಡುಗಳು ಇವರ ವಿಶೇಷ ಜನಪ್ರಿಯತೆಗೆ ಸಾಕ್ಷಿಯಾಗಿದ್ದವು. ಗ್ರಾಮೀಣ ಪ್ರದೇಶಗಳಲ್ಲಿ ಕಳೆ ತೆಗೆಯುವಾಗ, ಹುಲ್ಲುಕೊಯ್ಯುವಾಗ, ಭತ್ತದ ಒಕ್ಕಣೆ ಮಾಡುವಾಗ, ಹುಣಸೆ ಕಾಯಿ ಕೀಳುವಾಗ, ಕಡಲೆಕಾಯಿ ಸುಲಿಯುವಾಗ ಮತ್ತು ಇತರ ಕೃಷಿ ಕಾರ್ಯಗಳನ್ನು ಮಾಡುವಾಗ ಸಮಯೋಚಿತವಾದ ಜಾನಪದ ಗೀತೆಗಳನ್ನು ಹಾಡುತ್ತಿದ್ದುದು ಹಾಗೂ ಅನೇಕ ಪುರಾಣ ಪ್ರಸಿದ್ಧ ಕತೆಗಳನ್ನು ಹೇಳುತ್ತಿದ್ದುದು ಇವರ ವಿಶೇಷ.

**ಸಂಘರ್ಷಮಯ ಜೀವನ**

ಇವರು ಶಾಲಾ ಪ್ರಾಧ್ಯಾಪಕರಾದ ಘಟ್ಟು ಶ್ರೀ ವಿಠ್ಠಲ ಕೃಷ್ಣರಾಯರನ್ನು 1931ರಲ್ಲಿ ವಿವಾಹವಾದರು. ಶ್ರೀ ವಿಠ್ಠಲಕೃಷ್ಣರಾಯರು ಸಾಹಿತಿಗಳು, ವಿಚಾರವಂತರೂ ಮತ್ತು ಕವಿಗಳಾಗಿದ್ದರು. ಮಂಡಿಕಲ್ ಚೌಡೇಶ್ವರಿದೇವಿಯ ದಂಡಕವನ್ನು ಮೊದಲಬಾರಿ ಕನ್ನಡದಲ್ಲಿ ರಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. 1955 ರಲ್ಲಿ ಪತಿ ವಿಠ್ಠಲಕೃಷ್ಣರಾಯರು ಪ್ಲೇಗ್ ಮಾರಿಗೆ ತುತ್ತಾಗಿ ಸಾವನ್ನಪ್ಪಿದರು. 35 ವರ್ಷ ಪ್ರಾಯದಲ್ಲಿ ಗಂಡನನ್ನು ಕಳೆದುಕೊಂಡ ಸರೋಜಮ್ಮನವರು ನಂತರದ ಜೀವನದುದ್ದಕ್ಕೂ ಅನೇಕ ಸಂಘರ್ಷಗಳನ್ನೆದುರಿಸಬೇಕಾಯಿತು. 5 ಚಿಕ್ಕಮಕ್ಕಳ ಶ್ರೇಯೋಭಿವೃದ್ಧಿಯ ಪೂರ್ಣ ಜವಾಬ್ದಾರಿ ಮತ್ತು ಪತಿ ವಿಯೋಗದ ದುಃಖಗಳ ನಡುವೆ ಸರೋಜಮ್ಮನವರು ಅಪಾರ ದಿಟ್ಟತನವನ್ನು ತೋರಿದರು. ಅದೃಷ್ಟವಶಾತ್ ಇವರಿಗೆ ಘಟ್ಟು ಹಿರಿಯರ ಆಶ್ರಯ ಮತ್ತು ಪೂರ್ಣ ಪ್ರೋತ್ಸಾಹ ದೊರೆಯಿತು. ಮಂಡಿಕಲ್ಲಿನಲ್ಲಿ ವಾಸ್ತವ್ಯವಿದ್ದ ಸರೋಜಮ್ಮನವರು ಅಡಿಗೆ

ಮನೆಯಿಂದ ಹಿಡಿದು ಕೃಷಿ ಭೂಮಿಯ ವರೆಗೆ ಎಲ್ಲ ಕಾರ್ಯಗಳಲ್ಲೂ ಭಾಗಿಯಾಗಿ ತಮ್ಮ ಕುಟುಂಬವೇ ಅಲ್ಲದೇ ಇಡೀ ಘಾಟ್ಟು ವಂಶದ ಏಳಿಗೆಯ ಆಧಾರಸ್ತಂಭವಾದರು.

**ಅಪಾರ ಮೊನೋಸ್ಥೈರ್ಯ**



ಸರೋಜಮ್ಮನವರು ಸಾವನ್ನು ಅತಿ ಹತ್ತಿರದಿಂದ ಕಂಡೂ ವಿಚಲಿತರಾಗದೇ ಜೀವನ ಸಾಗಿಸಿದ ಛಲವಂತೆ. 1955 ರಲ್ಲಿ ಪತಿ ವಿಠ್ಠಲಕೃಷ್ಣರಾವ್ ಸಾವನ್ನಪ್ಪುವುದರೊಂದಿಗೆ ಇವರಿಗೆ ಸಾವಿನ ದರ್ಶನ ಪ್ರಾರಂಭವಾಯಿತು.

ಇವರು ತಮ್ಮ ಮಧ್ಯವಯಸ್ಸಿನಲ್ಲೇ ಎಲ್ಲಾ ಅಣ್ಣ-ತಮ್ಮಂದಿರು ಮತ್ತು ತಾಯಿ-ತಂದೆಯುರನ್ನು ಕಳೆದುಕೊಂಡರು. ಸೋಜಿಗವೆಂಬಂತೆ ಚಿಕ್ಕ ತಮ್ಮ ರಾಮರಾವ್‌ರಿಂದ ಮೊದಲ್ಗೊಂಡು, ಚಿಕ್ಕ ಅಣ್ಣ ವಾಸುದೇವರಾವ್, ಅವರಿಗಿಂತ ಹಿರಿಯ ನಾಗೇಶ ರಾವ್, ಹಿರಿಯಣ್ಣ ಶ್ರೀನಿವಾಸ ರಾವ್ ಮತ್ತು ತಂದೆ ವೆಂಕಣ್ಣನವರವರೆಗೆ ಚಿಕ್ಕವರಿಂದ ಹಿಡಿದು ದೊಡ್ಡವರವರೆಗೆ ಸರದಿಗೆ ವಿರುದ್ಧವಾಗಿ ಇವರ ಬಂಧುಗಳು ನಿರ್ಗಮಿಸಿದರು. ತಂಗಿಯರಾದ ಇಂದ್ರಮ್ಮ ಮತ್ತು ಸೀತಮ್ಮನವರೂ ಇವರ ಕಣ್ಮುಂದೆಯೇ ನಿಧನರಾದರು. ಇದು ಸಾಲದೆಂಬಂತೆ ತಮ್ಮ ಚಿಕ್ಕವಯಸ್ಸಿನಲ್ಲೇ ಇವರು ತಮ್ಮ ಎರಡನೇ ಹೆಣ್ಣು ಮಗಳಾದ ಪ್ರಭಾ ಮತ್ತು ತಮ್ಮ ಇಳಿ ವಯುಸ್ಸಿನಲ್ಲಿ ಹಿರಿಯ ಮಗಳು ಪ್ರೇಮಮ್ಮನನ್ನು ಕಳೆದುಕೊಂಡರು. ಈ ಎಲ್ಲ ಸಂಕಷ್ಟಗಳ ನಡುವೆ ಜೀವನೋತ್ಸಾಹ ಉಳಿಸಿಕೊಂಡ ಸರೋಜಮ್ಮನವರು ಸಹನೆಯ ಪ್ರತಿರೂಪವೆಂದರೆ ತಪ್ಪಾಗಲಾರದು.



**ತೀರ್ಥಯಾತ್ರೆಗಳು**

1973ರಲ್ಲಿ ಮೊದಲ ಬಾರಿಗೆ ಇವರು ದಳಸನೂರು ವೆಂಕಟಾಚಲಯ್ಯ ಮತ್ತು ಪದ್ಮಾವತಮ್ಮನವರೊಂದಿಗೆ ಬದರಿ ಯಾತ್ರೆ ಮಾಡಿದರು. ಇದೇ ಯಾತ್ರೆಯಲ್ಲಿ ಮಡಿ ದೀಕ್ಷೆಯನ್ನು ಪಡೆದು ಜೀವನ ಪರ್ಯಂತ ಏಕಭುಕ್ತ ವ್ರತ, ಪರಮಾತ್ಮನ ಸೇವೆ ಮತ್ತು ಸ್ವಯಂ ಪಾಕದ ನಿರ್ಣಯವನ್ನು ತೆಗೆದುಕೊಂಡರು.

ಇಪ್ಪತ್ತು ವರ್ಷಗಳ ನಂತರ 1993ರಲ್ಲಿ ಮತ್ತೊಮ್ಮೆ ಬದರಿ ಯಾತ್ರೆ ಮಾಡುವ ಅವಕಾಶ ಇವರಿಗೆ ತಮ್ಮ ಪುತ್ರ ಪ್ರಭಾಕರ ರಾಯರ ಮಿತ್ರರಾದ ಎಲ್. ಜಿ. ನಾಗೇಶ್ ರಾಯರ ವತಿಯಿಂದ ದೊರೆಯಿತು. ಹೀಗೆ ಎರಡು ಬಾರಿ ಯಾತ್ರೆಯನ್ನು ಮಾಡಿ ಸರೋಜಮ್ಮನವರು ತಮ್ಮ ಜೀವನ ಸಾರ್ಥಕ ಪಡಿಸಿಕೊಂಡರು.

**ಕನಕಾಭಿಷೇಕ**

1996ರಲ್ಲಿ ತಮ್ಮ ಮೊದಲ ಮಗ ಪ್ರಭಾಕರ ರಾಯರ ಹಿರಿಯ ಪುತ್ರ ವಿಠ್ಠಲಕೃಷ್ಣನ ಮೊದಲ ಗಂಡು ಮಗ ಪವನನ ಜನನದ ಸಂದರ್ಭದಲ್ಲಿ ಕನಕಾಭಿಷೇಕ ಮಹೋತ್ಸವವನ್ನು ನೆರವೇರಿಸಲಾಯಿತು. ಕನಕಾಭಿಷೇಕವು ಒಂದು ವಿಶಿಷ್ಟ ಆಚರಣೆ. ಇದು ಎಲ್ಲರಿಗೂ ಲಭ್ಯವಾಗುವುದಿಲ್ಲ. ವ್ಯಕ್ತಿಯೊಬ್ಬನ ಸಂತತಿಯ ಮುಂದಿನ ಮೂರು

ತಲೆಮಾರುಗಳಲ್ಲಿ (ನಾಲ್ಕನೆಯ ತಲೆ) ಸತತವಾಗಿ ಮೊದಲನೇ ಸಂತಾನವು ಗಂಡೇ ಆದಲ್ಲಿ ಕನಕಾಭಿಷೇಕದ ಅಪೂರ್ವ ಅವಕಾಶ ದೊರೆಯುತ್ತದೆ.

**ಸರೋಜಮ್ಮನವರ ವಿಶಿಷ್ಟತೆಗಳು:**

**ಮಾನಸಿಕ ದೃಢತೆ:** ಪತಿಯ ವಿಯೋಗದ ನಂತರ 55 ವರ್ಷಗಳ ಕಾಲ ಏಳುಬೀಳುಗಳ ನಡುವೆ ಜೀವನ.

**ಆಕರ್ಷಣೀಯ ವ್ಯಕ್ತಿತ್ವ:** ಗೌರವರ್ಣ, ಗೌರವಯುತ ವ್ಯಕ್ತಿತ್ವ, ಒಳ್ಳೆಯ ಶಾರೀರ, ಕಂಚಿನ ಕಂಠ ಮತ್ತು ಎಲ್ಲರಿಗೂ ಬೇಕಾದ ಸ್ನೇಹಮಯ ವ್ಯಕ್ತಿತ್ವ

**ಕ್ರೀಡಾ ಮನೋಭಾವ:** ಚೌಕಾಬಾರ, ಪಗಡೆಯಾಟಗಳಲ್ಲಿ ಮಕ್ಕಳಂತೆ ತಲ್ಲೀನರಾಗುತ್ತಿದ್ದರು. ಕ್ರಿಕೆಟ್ ಆಟವನ್ನು ಇಷ್ಟಪಟ್ಟು ನೋಡುತ್ತಿದ್ದರು ಮತ್ತು ರಾಜಕೀಯ ವಿಷಯಗಳಲ್ಲಿ ಮಹದಾಸಕ್ತಿ.

**ಭಾಷಾ ಪ್ರಾವೀಣ್ಯತೆ:** ಕನ್ನಡ ಮತ್ತು ತೆಲುಗು ಸುಲಲಿತವಾಗಿ ಮಾತನಾಡುತ್ತಿದ್ದರು ಮತ್ತು ಇಂಗ್ಲಿಷ್ ಹಿಂದಿಯನ್ನು ಅರ್ಥಮಾಡಿಕೊಂಡು ಮಾತನಾಡುವ ಪ್ರಯತ್ನ ಮಾಡುತ್ತಿದ್ದರು.

**ಇತರೆ:** ರಾಮಾಯಣ, ಮಹಾಭಾರತ ಮತ್ತು ಭಾಗವತ ಕಥೆಗಳ ಸಮೃದ್ಧ ಗಣಿ. ಅಡಿಗೆ ಪ್ರವೀಣೆ. ಹೋಳಿಗೆ ಮಾಡುವುದರಲ್ಲಿ ಎತ್ತಿದ ಕೈ.

**ಶಸ್ತ್ರಚಿಕಿತ್ಸೆ**

2003ರಲ್ಲಿ ಮನೆಯಲ್ಲಿ ನಡೆದಾಡುವಾಗ ಆಕಸ್ಮಿಕವಾಗಿ ಬಿದ್ದು ಸರೋಜಮ್ಮನವರ ತೊಡೆಯ ಮೂಳೆ ಮುರಿಯಿತು. ಶಸ್ತ್ರಚಿಕಿತ್ಸೆಯ ಮೂಲಕ ಸ್ಟೀಲ್ ರಾಡ್ ಹಾಕಿ ಇವರ ಕಾಲನ್ನು ಸರಿಪಡಿಸಲಾಯಿತು. ಈ ಶಸ್ತ್ರಚಿಕಿತ್ಸೆಯಾದ ಕೇವಲ 2 ತಿಂಗಳಲ್ಲಿ ಅವರು ತಮ್ಮ ಕಾಲ್ಮೇಲೆ ನಿಂತು ನಡೆಯುವಂತಾದುದು ಅವರ ಜೀವನೋತ್ಸಾಹಕ್ಕೆ ಸಾಕ್ಷಿ.

ಆದರೆ 2010ರಲ್ಲಿ ಇವರು ಮತ್ತೊಮ್ಮೆ ಬಿದ್ದು ಇನ್ನೊಂದು ಕಾಲಿನ ತೊಡೆ ಮೂಳೆ ಮುರಿದಾಗ ಮತ್ತೊಮ್ಮೆ ಶಸ್ತ್ರಚಿಕಿತ್ಸೆಗೊಳಪಡಬೇಕಾಯಿತು. ಈ ಬಾರಿ ವೈದ್ಯರೇ ಶಸ್ತ್ರಚಿಕಿತ್ಸೆ ಮಾಡಲು ಹಿಂಜರಿದಾಗ ಅವರಿಗೆ ಧೈರ್ಯ ತುಂಬಿದವರು ಚಿಕಿತ್ಸೆ ಮಾಡಿಸಿಕೊಳ್ಳಬೇಕಿದ್ದ ಸರೋಜಮ್ಮನವರು. ಅವರ ಜೀವನಾಸಕ್ತಿಗೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕಾಗಿಲ್ಲ. ಈ ಬಾರಿಯೂ ನಿಂತು ನಡೆಯುವ ಸಾಹಸ ಮಾಡಿದರಾದರೂ ಅವರ ಹೃದಯ ಬಡಿತದ ಶಕ್ತಿಯು ಕ್ಷೀಣಿಸಿದ್ದರಿಂದ ಅವರು ಜೀವನದ ಬಂಡಿಯನ್ನು ಮುಂದುವರಿಸಲಾಗಲಿಲ್ಲ. 2010ರಲ್ಲಿ ತಮ್ಮ ಕೊನೆಯ ಮರಿಮಗನ ಜನನದ ಆನಂದವನ್ನು ಸವಿದು ಡಿಸೆಂಬರ್ ಮಾಹೆಯಲ್ಲಿ ಸರೋಜಮ್ಮನವರು ನಿಧನರಾದರು. ವಿಶೇಷವೆಂದರೆ, ಅವರು ಮೊದಲ ಬಾರಿ ಬಿದ್ದು (ಡಿಸೆಂಬರ್ 11, 2003ರಲ್ಲಿ) ಸರಿಯಾಗಿ 7 ವರ್ಷಗಳ ನಂತರ ಡಿಸೆಂಬರ್ 11, 2010ರಂದು ದೈವಾಧೀನರಾದರು.

ಮೊದಲ ಶಸ್ತ್ರಚಿಕಿತ್ಸೆಯ ನಂತರ ತಮ್ಮ ಜೀವನೋತ್ಸಾಹವನ್ನು ಉಳಿಸಿಕೊಂಡಿದ್ದರಾದರೂ, ಸರೋಜಮ್ಮನವರು ತಮ್ಮ ಲೋಕಾಸಕ್ತಿಯನ್ನು ಕಳೆದುಕೊಂಡರು. ಅವರು ಬಹು ಕುತೂಹಲದಿಂದ ನೋಡುತ್ತಿದ್ದ ಟಿವಿ, ರೇಡಿಯೋ ಮತ್ತು ಸುದ್ದಿಪತ್ರಿಕೆಗಳನ್ನು ಅವರು ತಮ್ಮ ಕೊನೆಯ ವರ್ಷಗಳಲ್ಲಿ ಪೂರ್ಣವಾಗಿ ತ್ಯಜಿಸಿದ್ದರು.

**ಜೀವನದ ಕಿರುನೋಟ**

- 1930 ರಲ್ಲಿ ವಿವಾಹ, 1935 ರಲ್ಲಿ ಪತಿಯ ಮನೆಯಲ್ಲಿ ಸಂಸಾರ ಹೂಡಿಕೆ
- 1939-40 ರಲ್ಲಿ ಪತಿಯೊಂದಿಗೆ ಬೆಂಗಳೂರಿನಲ್ಲಿ ಸ್ವಲ್ಪ ಕಾಲ ನಿವಾಸ
- 1941ರಲ್ಲಿ ತಾಯ್ತನ, ಮೊದಲ ಮಗುವಿನ ಜನನ; 1955ರ ವರೆಗೆ 6 ಮಕ್ಕಳ ಜನನ.
- 1955ರವರೆಗೂ ಸಂಸಾರದಲ್ಲಿ ಸರಿಗಮ. ಗುರುಪತ್ನಿಯಾಗಿ ಜನಪ್ರಿಯತೆ.
- 1955 ರಲ್ಲಿ ಪತಿ ವಿಯೋಗ. ಪ್ಲೇಗ್ ಮಾರಿಯಿಂದ ಪತಿಯ ಸಾವು.
- 1958ರಲ್ಲಿ ಹಿರಿಯ ಪುತ್ರಿಯ ವಿವಾಹ
- 1966ರಲ್ಲಿ ಮೊದಲ ಪುತ್ರನ ವಿವಾಹ. ಇದಾದ ನಂ ತರ ಬೆಂ ಗಳೂರಿನಲ್ಲಿ ಪುತ್ರನೊಂದಿಗೆ ಸಂಸಾರ ನೌಕೆ ಮುಂದುವರಿಕೆ.
- 1970ರ ದಶಕದಲ್ಲಿ ಉಳಿದ ಮೂರು ಮಕ್ಕಳ ವಿವಾಹ. 10 ಜನ ಮೊಮ್ಮಕ್ಕಳು ಮತ್ತು 9 ಜನ ಮರಿಮಕ್ಕಳ ಜನನ.
- 1973ರಲ್ಲಿ ಮೊದಲ ಬಾರಿಗೆ ಬದರಿ ಯಾತ್ರೆ, 1993ರಲ್ಲಿ ಮತ್ತೊಮ್ಮೆ ಬದರಿ ಯಾತ್ರೆ
- 1973 ರಲ್ಲಿ ಮಡಿ ದೀಕ್ಷೆ, ಜೀವನ ಪರ್ಯಂತ ಏಕಭುಕ್ತ ವ್ರತ, ಪರಮಾತ್ಮನ ಸೇವೆ ಮತ್ತು ಸ್ವಯಂ ಪಾಕದ ದೀಕ್ಷೆ
- 1996ರಲ್ಲಿ ಕನಕಾಭಿಷೇಕ
- 2003ರಲ್ಲಿ ಮೊದಲ ಬಾರಿಗೆ ಬೆಂಗಳೂರಿನಿಂದ ಮುಂಬೈವರೆಗೂ ವಿಮಾನ ಯಾನ

**ಸ್ವರ್ಗಾರೋಹಣ**

ಸರೋಜಮ್ಮನವರು 91 ವರ್ಷಗಳ ತುಂಬು ಜೀವನ ನಡೆಸಿ, ಬೆಂಗಳೂರಿನ ಯಲಹಂಕದಲ್ಲಿರುವ ತಮ್ಮ ಮಗ ಪ್ರಭಾಕರ ರಾಯರ ನಿವಾಸದಲ್ಲಿ ನಿಧನ ಹೊಂದಿದರು. ಇವರು ಮೂರು ಜನ ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು ಮತ್ತು ಮೊಮ್ಮಕ್ಕಳು, ಮರಿ ಮಕ್ಕಳನ್ನು ಅಗಲಿದ್ದಾರೆ.

ಮೃತರ ಆತ್ಮಶಾಂತಿ ಕಾರ್ಯಕ್ರಮಗಳು 19-12-2010, ಭಾನುವಾರದಿಂದ ಪ್ರಾರಂಭವಾಗಿ 24-12-10, ಶುಕ್ರವಾರದವರೆಗೆ ಮಲ್ಲೇಶ್ವರದ 'ವೈದಿಕ ಧರ್ಮ ಸಭಾ' ಮತ್ತು ಯಲಹಂಕದ ಪ್ರಭಾಕರ್ ರಾವ್‌ರವರ ಸ್ವಗೃಹ ಈಶಾವಾಸ್ಯದಲ್ಲಿ ನೆರವೇರಿಸಲ್ಪಟ್ಟಿತು.

ಸರೋಜಮ್ಮನವರ ಸ್ಮರಣೆಗಾಗಿ 24-12-2010ರಂದು ಅವರ ಶ್ರದ್ಧಾಂಜಲಿ ಸಮಾರಂಭದಲ್ಲಿ ಈ ಕಿರು ಪರಿಚಯವನ್ನು ಹೊರತರಲಾಗಿದೆ.

## ಅವಿಸ್ಮರಣೀಯ ಕ್ಷಣಗಳು

































